# ಸಾರ್ವಜನಿಕ ಹೊಣೆಗಾರಿಕೆ ವಿಮಾ ಅಧಿನಿಯಮ, 1991

**5.5.2007ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 37ನೇ ಸಂಪುಟದ 1ನೇ ಸಂಚಿಕೆಯಲ್ಲಿ 180 ರಿಂದ 188ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ**

## ವಿಷಯಾನುಕ್ರಮಣಿಕೆ

**ಪ್ರಕರಣಗಳು :**


1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ತಪ್ಪಿರಲಿ- ಇಲ್ಲದಿರಲಿ ತತ್ವದ ಮೇಲೆ ಕೆಲವು ಪ್ರಕರಣಗಳಲ್ಲಿ ಪರಿಹಾರ ನೀಡುವ ಹೊಣೆಗಾರಿಕೆ
4. ವಿಮಾ ಪಾಲಿಸಿಗಳನ್ನು ತೆಗೆದುಕೊಳ್ಳುವುದು ಒಡೆಯನ ಕರ್ತವ್ಯ
5. ಕಲೆಕ್ಟರನಿಂದ ಅಪಘಾತದ ಪರಿಶೀಲನೆ ಮತ್ತು ಪ್ರಕಟಣೆ
6. ಪರಿಹಾರದ ಕ್ಲೇಮಿಗಾಗಿ ಅರ್ಜಿ
7. ಪರಿಹಾರದ ಐತೀರ್ಪು

7ಎ. ಪರಿಸರ ಪರಿಹಾರ ನಿಧಿಯ ಸ್ಥಾಪನೆ

8. ಮರಣ, ಮೊದಲಾದವುಗಳಿಗಾಗಿ ನಷ್ಟ ಪರಿಹಾರವನ್ನು ಕ್ಲೇಮು ಮಾಡುವ ಇತರ ಹಕ್ಕುಗಳಿಗೆ ಸಂಬಂಧಪಟ್ಟ ಉಪಬಂಧಗಳು
9. ಮಾಹಿತಿ ತರಿಸಿಕೊಳ್ಳುವ ಅಧಿಕಾರ
10. ಪ್ರವೇಶಿಸುವ ಮತ್ತು ತಪಾಸಣೆ ಮಾಡುವ ಅಧಿಕಾರ
11. ಶೋಧಿಸುವ ಮತ್ತು ಅಭಿಗ್ರಹಿಸುವ ಅಧಿಕಾರ
12. ನಿರ್ದೇಶನಗಳನ್ನು ನೀಡುವ ಅಧಿಕಾರ
13. ಅಪಾಯಕಾರಿ ವಸ್ತುಗಳನ್ನು ನಿರ್ವಹಿಸದಂತೆ ಒಡೆಯನನ್ನು ನಿಗ್ರಹಿಸಲು ನ್ಯಾಯಾಲಯಗಳಿಗೆ ಅರ್ಜಿಸಲ್ಲಿಸುವ ಅಧಿಕಾರ
14. 4ನೇ ಪ್ರಕರಣದ (1)ನೇ ಉಪಪ್ರಕರಣವನ್ನು ಅಥವಾ (2)ನೇ ಉಪ ಪ್ರಕರಣವನ್ನು ಉಲ್ಲಂಘಿಸಿದ್ದಕ್ಕಾಗಿ ಅಥವಾ 12ನೇ ಪ್ರಕರಣದ ಮೇರೆಗಿನ ನಿರ್ದೇಶನಗಳನ್ನು ಪಾಲಿಸಲು ತಪ್ಪಿದ್ದಕ್ಕಾಗಿ ದಂಡ
15. 9ನೇ ಪ್ರಕರಣದ ಮೇರೆಗೆ ನೀಡಿದ ನಿರ್ದೇಶನವನ್ನು ಅಥವಾ 11ನೇ ಪ್ರಕರಣದ ಮೇರೆಗಿನ ಆದೇಶವನ್ನು ಪಾಲಿಸಲು ತಪ್ಪಿದ್ದಕ್ಕಾಗಿ ಅಥವಾ 10 ಅಥವಾ 11ನೇ ಪ್ರಕರಣಗಳ ಮೇರೆಗಿನ ಪ್ರಕಾರ್ಯಗಳನ್ನು ನಿರ್ವಹಿಸುವ ಯಾರೇ ವ್ಯಕ್ತಿಗೆ ಅಡ್ಡಿಯನ್ನುಂಟು ಮಾಡಿದ್ದಕ್ಕಾಗಿ ದಂಡ
16. ಕಂಪನಿಗಳಿಂದ ಅಪರಾಧಗಳು
17. ಸರ್ಕಾರಿ ಇಲಾಖೆಗಳಿಂದ ಸಂಭವಿಸುವ ಅಪರಾಧಗಳು
18. ಅಪರಾಧಗಳ ಸಂಜ್ಞಾನ
19. ಪ್ರತ್ಯಾಯೋಜಿಸುವುದಕ್ಕೆ ಅಧಿಕಾರ
20. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ
21. ಸಲಹಾ ಸಮಿತಿ
22. ಇತರೆ ಕಾನೂನುಗಳ ಪರಿಣಾಮ
23. ನಿಯಮ ರಚನಾಧಿಕಾರ

**ಅನುಸೂಚಿ.**

# ಸಾರ್ವಜನಿಕ ಹೊಣೆಗಾರಿಕೆ ವಿಮಾ ಅಧಿನಿಯಮ, 1991

(1991ರ ಅಧಿನಿಯಮ ಸಂಖ್ಯೆ 6)

[22ನೇ ಜನವರಿ, 1991]

ಯಾವುವೇ ಅಪಾಯಕಾರಿ ವಸ್ತುಗಳನ್ನು ನಿರ್ವಹಿಸುವಾಗ ಸಂಭವಿಸುವ ಅಪಘಾತದಿಂದ ಬಾಧಿತರಾಗುವ ವ್ಯಕ್ತಿಗಳಿಗೆ ತಕ್ಷಣ ಪರಿಹಾರ ಒದಗಿಸುವ ಉದ್ದೇಶಕ್ಕಾಗಿ ಸಾರ್ವಜನಿಕ ಹೊಣೆಗಾರಿಕೆ ವಿಮೆ ಒದಗಿಸಲು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಅನುಷಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ಭಾರತ ಗಣರಾಜ್ಯದ ನಲವತ್ತೊಂದನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಸಾರ್ವಜನಿಕ ಹೊಣೆಗಾರಿಕೆ ವಿಮಾ ಅಧಿನಿಯಮ, 1991 ಎಂದು ಕರೆಯತಕ್ಕದ್ದು.

(2) ಇದು ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಅಪಘಾತ" ಎಂದರೆ ಯಾವುದೇ ಅಪಾಯಕಾರಿ ವಸ್ತುವನ್ನು ನಿರ್ವಹಿಸುವಾಗ ಸಂಭವಿಸುವ ಆಕಸ್ಮಿಕ ಅಥವಾ ದಿಢೀರ್ ಅಥವಾ ಅನುದ್ದೇಶಿತ ಘಟನೆಯನ್ನು ಒಳಗೊಳ್ಳುವ ಮತ್ತು ಯಾರೇ ವ್ಯಕ್ತಿಯನ್ನು ನಿರಂತರವಾಗಿ ಅಥವಾ ಬಿಟ್ಟುಬಿಟ್ಟು ಅಥವಾ ಪುನಃ ಪುನಃ ಸಾವಿಗೆ ಅಥವಾ ಕ್ಷತಿಗೆ ಈಡು ಮಾಡುವಲ್ಲಿ ಅಥವಾ ಯಾವುದೇ ಆಸ್ತಿಗೆ ಹಾನಿಯುಂಟು ಮಾಡುವಲ್ಲಿ ಪರ್ಯಾವಸಾನಗೊಳ್ಳುವ ಒಂದು ಅಪಘಾತ. ಆದರೆ, ಅದರಲ್ಲಿ ಯುದ್ಧದ ಅಥವಾ ರೇಡಿಯೋ ವಿಕಿರಣದ ಕಾರಣ ಮಾತ್ರದಿಂದಲೇ ಆಗುವ ಅಪಘಾತಗಳು ಒಳಗೊಳ್ಳುವುದಿಲ್ಲ;

(ಬಿ) "ಕಲೆಕ್ಟರ್" ಎಂದರೆ ಅಪಘಾತ ಸಂಭವಿಸಿದ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿ ಹೊಂದಿರುವ ಕಲೆಕ್ಟರ್;

(ಸಿ) ಯಾವುದೇ ಅಪಾಯಕಾರಿ ವಸ್ತುವಿನ ಸಂಬಂಧದಲ್ಲಿ "ನಿರ್ವಹಣೆ" ಎಂದರೆ ಅಂಥ ಅಪಾಯಕಾರಿ ವಸ್ತುವಿನ ತಯಾರಿಕೆ, ಸಂಸ್ಕರಣ, ಪ್ರಸಂಸ್ಕರಣ, ಪ್ಯಾಕೇಜ್, ದಾಸ್ತಾನು, ವಾಹನಗಳ ಮೂಲಕ ಸಾಗಣೆ, ಬಳಕೆ, ಸಂಗ್ರಹಣೆ, ನಾಶ, ಪರಿವರ್ತನೆ, ಮಾರಾಟಕ್ಕಾಗಿ ಇಡುವುದು, ವರ್ಗಾವಣೆ ಅಥವಾ ಅದೇ ಬಗೆಯ ಯಾವುದೇ ಕಾರ್ಯ;

(ಡಿ) "ಅಪಾಯಕಾರಿ ವಸ್ತು" ಎಂದರೆ ಪರಿಸರ (ಸಂರಕ್ಷಣೆ) ಅಧಿನಿಯಮ, 1986 (1986ರ 29)ರ ಮೇರೆಗೆ ಅಪಾಯಕಾರಿ ವಸ್ತುವೆಂದು ಪರಿಭಾಷಿಸಲಾಗಿರುವ ಮತ್ತು ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಪ್ರಮಾಣವನ್ನು ಮೀರುವ ಯಾವುದೇ ವಸ್ತು ಅಥವಾ ತಯಾರಿಕೆ;

(ಇ) "ವಿಮೆ" ಎಂದರೆ 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗಿನ ಹೊಣೆಗಾರಿಕೆಗೆ ಪ್ರತಿಯಾಗಿರುವ ವಿಮೆ;

(ಎಫ್) "ಅಧಿಸೂಚನೆ" ಎಂದರೆ ರಾಜಪತ್ರದಲ್ಲಿ ಪ್ರಕಟಿಸಲಾಗುವ ಅಧಿಸೂಚನೆ;

(ಜಿ) "ಒಡೆಯ" ಎಂದರೆ ಅಪಘಾತ ಸಂಭವಿಸಿದ ಸಮಯದಲ್ಲಿ ಯಾವುದೇ ಅಪಾಯಕಾರಿ ವಸ್ತುವಿನ ಒಡೆತನ ಹೊಂದಿರುವ ಅಥವಾ ಅದರ ನಿರ್ವಹಣೆಯ ಮೇಲೆ ನಿಯಂತ್ರಣ ಹೊಂದಿರುವ ಒಬ್ಬ ವ್ಯಕ್ತಿ ಮತ್ತು,-

(i) ಒಂದು ಫರ್ಮಿನ ಸಂಬಂಧದಲ್ಲಿ, ಅದರ ಪಾಲುಗಾರರ ಪೈಕಿ ಯಾರೇ ಒಬ್ಬ ಪಾಲುಗಾರ;

(ii) ಒಂದು ಸಂಸ್ಥೆಯ ಸಂಬಂಧದಲ್ಲಿ ಅದರ ಸದಸ್ಯರ ಪೈಕಿ ಯಾರೇ ಒಬ್ಬ ಸದಸ್ಯ; ಮತ್ತು

(iii) ಒಂದು ಕಂಪನಿಯ ಸಂದರ್ಭದಲ್ಲಿ, ಅದರ ನೇರ ಪ್ರಭಾರ ಹೊಂದಿರುವ ಮತ್ತು ಆ ಕಂಪನಿಯ ವ್ಯವಹಾರ ನಡೆಸುವ ಸಂಬಂಧದಲ್ಲಿ ಕಂಪನಿಗೆ ಜವಾಬ್ದಾರರಾಗಿರುವ ಅದರ ನಿರ್ದೇಶಕರ, ವ್ಯವಸ್ಥಾಪಕರ, ಕಾರ್ಯದರ್ಶಿಗಳ ಅಥವಾ ಇತರ ಅಧಿಕಾರಿಗಳ ಪೈಕಿ ಯಾರೇ ಒಬ್ಬ

- ಇವರು ಸೇರುತ್ತಾರೆ.

(ಎಚ್) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗಿನ ನಿಯಮಗಳ ಮೂಲಕ ನಿಯಮಿಸಲಾದುದು;

(ಎಚ್‌ಎ) "ಪರಿಹಾರ ನಿಧಿ" ಎಂದರೆ 7ಎ ಪ್ರಕರಣದ ಮೇರೆಗೆ ಸ್ಥಾಪಿಸಲಾದ ಪರಿಸರ ಪರಿಹಾರ ನಿಧಿ;

(ಐ) "ನಿಯಮಗಳು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳು;

(ಜೆ) "ವಾಹನ" ಎಂದರೆ ರೈಲು ಸಾರಿಗೆಯನ್ನು ಹೊರತುಪಡಿಸಿ ಯಾವುದೇ ರೀತಿಯ ಭೂ ಸಾರಿಗೆ ಸಾಧನ.

**3. ತಪ್ಪಿರಲಿ-ಇಲ್ಲದಿರಲಿ ತತ್ವದ ಮೇಲೆ ಕೆಲವು ಪ್ರಕರಣಗಳಲ್ಲಿ ಪರಿಹಾರ ನೀಡುವ ಹೊಣೆಗಾರಿಕೆ.-** (1) ಒಂದು ಅಪಘಾತದ ಪರಿಣಾಮವಾಗಿ ಯಾರೇ ವ್ಯಕ್ತಿಗೆ (ಕಾರ್ಮಿಕನನ್ನು ಹೊರತುಪಡಿಸಿ) ಮರಣ ಅಥವಾ ಕ್ಷತಿ ಉಂಟಾದಲ್ಲಿ ಅಥವಾ ಯಾವುದೇ ಸ್ವತ್ತಿಗೆ ಹಾನಿ ಉಂಟಾದಲ್ಲಿ, ಒಡೆಯನು ಅಂಥ ಮರಣ, ಕ್ಷತಿ ಅಥವಾ ಹಾನಿಗಾಗಿ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವಂಥ ಪರಿಹಾರವನ್ನು ನೀಡಲು ಬದ್ಧನಾಗಿರತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಪರಿಹಾರಕ್ಕಾಗಿ (ಇನ್ನು ಮುಂದೆ ಈ ಅಧಿನಿಯಮದಲ್ಲಿ ಪರಿಹಾರಕ್ಕಾಗಿ ಕ್ಲೇಮು ಎಂಬುದಾಗಿ ಉಲ್ಲೇಖಿಸಲಾಗಿದೆ) ಯಾವುದೇ ಕ್ಲೇಮು ಮಾಡಿರುವಲ್ಲಿ, ಯಾವ ಮರಣ, ಕ್ಷತಿ ಅಥವಾ ಹಾನಿಗೆ ಸಂಬಂಧಿಸಿದಂತೆ ಆ ಕ್ಲೇಮನ್ನು ಮಾಡಲಾಗಿದೆಯೋ ಅದು ಯಾರೇ ವ್ಯಕ್ತಿಯ ಅಕ್ರಮ ಕೃತ್ಯ, ನಿರ್ಲಕ್ಷ್ಯ ಅಥವಾ ತಪ್ಪಿನಿಂದ ಆಗಿದೆಯೆಂದು ವಾದಿಸುವಂತೆ ಮತ್ತು ರುಜುವಾತುಪಡಿಸುವಂತೆ ಆ ಕ್ಲೇಮುದಾರನನ್ನು ಅಗತ್ಯಪಡಿಸತಕ್ಕದ್ದಲ್ಲ.

**ವಿವರಣೆ.-** ಈ ಪ್ರಕರಣದ ಉದ್ದೇಶಗಳಿಗಾಗಿ,-

(i) "ಕೆಲಸಗಾರ" ಎಂಬ ಪದವು ಕೆಲಸಗಾರ ನಷ್ಟ ಪರಿಹಾರ ಅಧಿನಿಯಮ, 1923 (1923ರ 8) ಇದರಲ್ಲಿ ಅದಕ್ಕೆ ನೀಡಲಾಗಿರುವ ಅರ್ಥವನ್ನೇ ಹೊಂದಿರತಕ್ಕದ್ದು;

(ii) "ಕ್ಷತಿ" ಎಂಬುದರಲ್ಲಿ ಒಂದು ಅಪಘಾತದಿಂದಾಗಿ ಉಂಟಾಗುವ ಶಾಶ್ವತ ಸಂಪೂರ್ಣ ಅಥವಾ ಶಾಶ್ವತ ಭಾಗಶಃ ವಿಕಲತೆ ಅಥವಾ ಕಾಯಿಲೆ ಒಳಗೊಂಡಿರುತ್ತದೆ.

**4. ವಿಮಾ ಪಾಲಿಸಿಗಳನ್ನು ತೆಗೆದುಕೊಳ್ಳುವುದು ಒಡೆಯನ ಕರ್ತವ್ಯ.-** (1) ಪ್ರತಿಯೊಬ್ಬ ಒಡೆಯನು, ತಾನು ಯಾವುದೇ ಅಪಾಯಕಾರಿ ವಸ್ತುವನ್ನು ನಿರ್ವಹಿಸಲು ಪ್ರಾರಂಭಿಸುವುದಕ್ಕೆ ಮುಂಚೆ 3ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಪರಿಹಾರವನ್ನು ನೀಡಬೇಕಾದ ಅವನ ಹೊಣೆಗಾರಿಕೆಗೆ ಪ್ರತಿಯಾಗಿ ವಿಮಾ ರಕ್ಷಣೆ ಒದಗಿಸುವ ಒಂದು ಅಥವಾ ಹೆಚ್ಚು ವಿಮಾ ಕರಾರುಗಳನ್ನುಳ್ಳ ವಿಮಾ ಪಾಲಿಸಿಗಳನ್ನು ತೆಗೆದುಕೊಳ್ಳತಕ್ಕದ್ದು:

ಪರಂತು, ಈ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ಯಾವುದೇ ಅಪಾಯಕಾರಿ ವಸ್ತುವನ್ನು ನಿರ್ವಹಿಸುವ ಯಾರೇ ಒಡೆಯನು ಆದಷ್ಟು ಬೇಗ ಮತ್ತು ಯಾವುದೇ ಸಂದರ್ಭದಲ್ಲಿ ಅಂಥ ಪ್ರಾರಂಭದಿಂದ ಒಂದು ವರ್ಷದೊಳಗಾಗಿ ಅಂಥ ಪಾಲಿಸಿ ಅಥವಾ ಪಾಲಿಸಿಗಳನ್ನು ತೆಗೆದುಕೊಳ್ಳತಕ್ಕದ್ದು.

(2) ಪ್ರತಿಯೊಬ್ಬ ಒಡೆಯನು, ಅಂಥ ನಿರ್ವಹಣೆಯು ಮುಂದುವರೆಯುವ ಅವಧಿಯುದ್ದಕ್ಕೂ ವಿಮಾ ಪಾಲಿಸಿಗಳು ಜಾರಿಯಲ್ಲಿರುವಂತೆ, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ವಿಮಾ ಪಾಲಿಸಿಯನ್ನು ಅದರ ಸಿಂಧುತ್ವದ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಕಾಲಕಾಲಕ್ಕೆ ನವೀಕರಿಸತಕ್ಕದ್ದು.

(2ಎ) ಯಾರೇ ಒಬ್ಬ ಒಡೆಯನು ತೆಗೆದುಕೊಂಡ ಅಥವಾ ನವೀಕರಿಸಿದ ಯಾವುದೇ ವಿಮಾ ಪಾಲಿಸಿಯ ಮೊತ್ತವು, ನಿಯಮಿಸಬಹುದಾದಂತೆ, ಯಾವುದೇ ಅಪಾಯಕಾರಿ ವಸ್ತುವನ್ನು ನಿರ್ವಹಿಸುವ ಮತ್ತು ಒಡೆಯನ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಉದ್ಯಮದ ಸಂದಾಯಿತ ಬಂಡವಾಳದ ಮೊತ್ತಕ್ಕಿಂತ ಕಡಿಮೆಯಿರತಕ್ಕದ್ದಲ್ಲ ಮತ್ತು ಐವತ್ತು ಕೋಟಿ ರೂಪಾಯಿಗಳನ್ನು ಮೀರದ ಮೊತ್ತಕ್ಕಿಂತ ಹೆಚ್ಚಿಗೆಯಾಗಿರತಕ್ಕದ್ದಲ್ಲ.

**ವಿವರಣೆ.-** ಈ ಉಪಪ್ರಕರಣದ ಉದ್ದೇಶಗಳಿಗಾಗಿ, "ಸಂದಾಯಿತ ಬಂಡವಾಳ" ಎಂದರೆ ಕಂಪನಿಯಾಗಿರದ ಒಬ್ಬ ಒಡೆಯನ ಸಂದರ್ಭದಲ್ಲಿ, ವಿಮೆ ಕರಾರಿನ ದಿನಾಂಕದಂದು ಇದ್ದ ಉದ್ಯಮದ ಎಲ್ಲ ಆಸ್ತಿಗಳ ಮತ್ತು ಸ್ಟಾಕುಗಳ ಮಾರುಕಟ್ಟೆ ಮೌಲ್ಯ.

(2ಬಿ) ಒಂದೇ ವಿಮಾ ಪಾಲಿಸಿಯಡಿಯಲ್ಲಿ ಬರುವ ವಿಮಾದಾರನ ಹೊಣೆಗಾರಿಕೆಯು ಆ ವಿಮಾ ಪಾಲಿಸಿಯಲ್ಲಿನ ವಿಮಾ ಕರಾರಿನ ನಿಬಂಧನೆಗಳಲ್ಲಿ ನಿರ್ದಿಷ್ಟಪಡಿಸಿರುವ ಮೊಬಲಗುಗಳನ್ನು ಮೀರತಕ್ಕದ್ದಲ್ಲ.

(2ಸಿ) ಪ್ರತಿಯೊಬ್ಬ ಒಡೆಯನು, ವಿಮಾ ಕಂತಿನ ಮೊತ್ತದ ಜೊತೆಗೆ, 7ಎ ಪ್ರಕರಣದ ಮೇರೆಗೆ ಸ್ಥಾಪಿಸಲಾದ ಪರಿಹಾರ ನಿಧಿಗೆ ಜಮೆ ಮಾಡುವುದಕ್ಕಾಗಿ ವಿಮಾ ಕಂತಿನ ಮೊಬಲಗಿಗೆ ಸಮನಾದ ಮೊತ್ತವನ್ನು ಮೀರದಂತೆ ನಿಯಮಿಸಬಹುದಾದಂಥ ಇನ್ನೂ ಹೆಚ್ಚಿನ ಮೊಬಲಗನ್ನು ಸಂದಾಯ ಮಾಡತಕ್ಕದ್ದು.

(2ಡಿ) ವಿಮಾದಾರನು, ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಅವಧಿಯೊಳಗಾಗಿ (2ಸಿ) ಉಪಪ್ರಕರಣದ ಮೇರೆಗೆ ಒಡೆಯನಿಂದ ಸ್ವೀಕರಿಸಿದ ಮೊಬಲಗನ್ನು ಪರಿಹಾರ ನಿಧಿಗೆ ಜಮೆ ಮಾಡುವುದಕ್ಕಾಗಿ 7ಎ ಪ್ರಕರಣದ

(3)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರಕ್ಕೆ ಸಂದಾಯ ಮಾಡತಕ್ಕದ್ದು ಮತ್ತು ವಿಮಾದಾರನು, ಆ ಮೊಬಲಗನ್ನು ಹಾಗೆ ಸಂದಾಯ ಮಾಡಲು ತಪ್ಪಿದಲ್ಲಿ, ಅದನ್ನು ಭೂಕಂದಾಯದ ಬಾಕಿಯಂತೆ ಅಥವಾ ಸಾರ್ವಜನಿಕ ತಗಾದೆಯಂತೆ ವಿಮಾದಾರನಿಂದ ವಸೂಲು ಮಾಡಲು ಅವಕಾಶವಿರತಕ್ಕದ್ದು.

(3) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಯಾರೇ ಒಡೆಯನನ್ನು, ಎಂದರೆ:-

(ಎ) ಕೇಂದ್ರ ಸರ್ಕಾರವನ್ನು;

(ಬಿ) ಯಾವುದೇ ರಾಜ್ಯ ಸರ್ಕಾರವನ್ನು;

(ಸಿ) ಕೇಂದ್ರ ಸರ್ಕಾರದ ಅಥವಾ ಒಂದು ರಾಜ್ಯ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ನಿಗಮವನ್ನು; ಅಥವಾ

(ಡಿ) ಯಾವುದೇ ಸ್ಥಳೀಯ ಪ್ರಾಧಿಕಾರವನ್ನು

- (1)ನೇ ಉಪಪ್ರಕರಣದ ಪ್ರವರ್ತನೆಯಿಂದ ವಿನಾಯಿತಿಗೊಳಿಸಬಹುದು:

ಪರಂತು, ಅಂಥ ಒಡೆಯನು 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗಿನ ಯಾವುದೇ ಹೊಣೆಗಾರಿಕೆಯನ್ನು ಪೂರೈಸುವುದಕ್ಕಾಗಿ ಈ ಕುರಿತು ರಚಿಸಲಾದ ನಿಯಮಗಳಿಗೆ ಅನುಸಾರವಾಗಿ ಒಂದು ನಿಧಿಯನ್ನು ಸ್ಥಾಪಿಸಿದ್ದ ಮತ್ತು ನಿರ್ವಹಿಸಿದ್ದ ಹೊರತು, ಆ ಒಡೆಯನ ಸಂಬಂಧದಲ್ಲಿ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

**5. ಕಲೆಕ್ಟರನಿಂದ ಅಪಘಾತದ ಪರಿಶೀಲನೆ ಮತ್ತು ಪ್ರಕಟಣೆ.-** ಕಲೆಕ್ಟರನ ಅಧಿಕಾರ ವ್ಯಾಪ್ತಿಯೊಳಗಿನ ಯಾವುದೇ ಸ್ಥಳದಲ್ಲಿ ಅಪಘಾತ ಸಂಭವಿಸಿರುವುದು ಅವನ ಗಮನಕ್ಕೆ ಬಂದಾಗಲೆಲ್ಲಾ, ಅವನು ಅಂಥ ಅಪಘಾತ ಸಂಭವಿಸಿದ ಬಗ್ಗೆ ಪರಿಶೀಲನೆ ಮಾಡತಕ್ಕದ್ದು ಮತ್ತು 6ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅರ್ಜಿಗಳನ್ನು ಆಹ್ವಾನಿಸುವುದಕ್ಕಾಗಿ ತಾನು ವಿಹಿತವೆಂದು ಭಾವಿಸುವ ರೀತಿಯಲ್ಲಿ, ಆ ಬಗ್ಗೆ ಪ್ರಕಟಣೆಗೆ ವ್ಯವಸ್ಥೆ ಮಾಡತಕ್ಕದ್ದು.

**6. ಪರಿಹಾರದ ಕ್ಲೇಮಿಗಾಗಿ ಅರ್ಜಿ.-** (1) ಪರಿಹಾರದ ಕ್ಲೇಮಿನ ಅರ್ಜಿಯನ್ನು ಈ ಕೆಳಕಂಡವರು ಸಲ್ಲಿಸಬಹುದು:-

(ಎ) ಕ್ಷತಿಗೊಂಡ ವ್ಯಕ್ತಿ;

(ಬಿ) ಹಾನಿಗೊಳಗಾದ ಸ್ವತ್ತಿನ ಒಡೆಯ;

(ಸಿ) ಅಪಘಾತದಿಂದ ಮರಣ ಉಂಟಾದಲ್ಲಿ, ಮೃತನ ಎಲ್ಲ ಕಾನೂನು ಸಮ್ಮತ ಪ್ರತಿನಿಧಿಗಳು ಅಥವಾ ಆ ಪೈಕಿ ಯಾರೇ ಒಬ್ಬನು; ಅಥವಾ

(ಡಿ) ಒಬ್ಬ ವ್ಯಕ್ತಿಯಿಂದ ಅಥವಾ ಅಂಥ ಸ್ವತ್ತಿನ ಒಡೆಯನಿಂದ ಅಥವಾ ಸಂದರ್ಭಾನುಸಾರ ಮೃತನ ಎಲ್ಲ ಕಾನೂನುಸಮ್ಮತ ಪ್ರತಿನಿಧಿಗಳಿಂದ ಅಥವಾ ಅವರ ಪೈಕಿ ಯಾರೇ ಒಬ್ಬನಿಂದ ಯುಕ್ತವಾಗಿ ಅಧಿಕೃತನಾದ ಯಾರೇ ಏಜೆಂಟ್:

ಪರಂತು, ಮೃತನ ಎಲ್ಲಾ ಕಾನೂನುಸಮ್ಮತ ಪ್ರತಿನಿಧಿಗಳು ಪರಿಹಾರ ಕೋರಿದ ಅಂಥ ಯಾವುದೇ ಅರ್ಜಿಯಲ್ಲಿ ಸೇರದಿರುವಲ್ಲಿ, ಅರ್ಜಿಯನ್ನು ಮೃತನ ಎಲ್ಲ ಕಾನೂನು ಸಮ್ಮತ ಪ್ರತಿನಿಧಿಗಳ ಪರವಾಗಿ ಅಥವಾ ಅವರ ಪ್ರಯೋಜನಕ್ಕಾಗಿ ಸಲ್ಲಿಸತಕ್ಕದ್ದು ಮತ್ತು ಅರ್ಜಿಯಲ್ಲಿ ಹಾಗೆ ಸೇರಿಲ್ಲದ ಕಾನೂನುಸಮ್ಮತ ಪ್ರತಿನಿಧಿಗಳನ್ನು ಅರ್ಜಿಯ ಪ್ರತಿವಾದಿಗಳನ್ನಾಗಿ ಸೇರಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಅರ್ಜಿಯನ್ನು ಕಲೆಕ್ಟರನಿಗೆ ಸಲ್ಲಿಸತಕ್ಕದ್ದು ಮತ್ತು ಅದು ನಿಯಮಿಸಬಹುದಾದ ಅಂಥ ನಮೂನೆಯಲ್ಲಿರತಕ್ಕದ್ದು ಮತ್ತು ಅಂಥ ವಿವರಗಳನ್ನು ಒಳಗೊಂಡಿರತಕ್ಕದ್ದು ಹಾಗೂ ಅಂಥ ದಸ್ತಾವೇಜುಗಳನ್ನು ಅದಕ್ಕೆ ಲಗತ್ತಿಸಿರತಕ್ಕದ್ದು.

(3) ಪರಿಹಾರಕ್ಕಾಗಿ ಸಲ್ಲಿಸುವ ಯಾವುದೇ ಅರ್ಜಿಯನ್ನು ಅಪಘಾತ ಸಂಭವಿಸಿದ ಐದು ವರ್ಷದೊಳಗಾಗಿ ಸಲ್ಲಿಸಿದ್ದ ಹೊರತು ಅದನ್ನು ಪುರಸ್ಕರಿಸತಕ್ಕದ್ದಲ್ಲ.

**7. ಪರಿಹಾರದ ಐತೀರ್ಪು.-** (1) 6ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗಿನ ಒಂದು ಅರ್ಜಿಯನ್ನು ಸ್ವೀಕರಿಸಿದ ಮೇಲೆ ಕಲೆಕ್ಟರನು, ಒಡೆಯನಿಗೆ ಅರ್ಜಿಯ ಬಗ್ಗೆ ನೋಟೀಸು ನೀಡಿದ ನಂತರ ಮತ್ತು ತಮ್ಮ ಅಹವಾಲು ಹೇಳಿಕೊಳ್ಳಲು ಪಕ್ಷಕಾರರಿಗೆ ಒಂದು ಅವಕಾಶ ನೀಡಿದ ನಂತರ, ಕ್ಲೇಮುಗಳ ಬಗ್ಗೆ ಅಥವಾ ಅವುಗಳ ಪೈಕಿ ಪ್ರತಿಯೊಂದು ಕ್ಲೇಮಿನ ಬಗ್ಗೆ ವಿಚಾರಣೆ ನಡೆಸತಕ್ಕದ್ದು ಮತ್ತು ತನಗೆ ನ್ಯಾಯವೆಂದು ಕಂಡುಬರುವ ಪರಿಹಾರದ ಹಣವನ್ನು ನಿರ್ಧರಿಸಿ ಮತ್ತು ಅಂಥ ಪರಿಹಾರದ ಮೊಬಲಗನ್ನು ಯಾವ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಸಂದಾಯ ಮಾಡತಕ್ಕದ್ದೆಂಬುದನ್ನು ನಿರ್ದಿಷ್ಟಪಡಿಸಿ ಐತೀರ್ಪು ನೀಡಬಹುದು.

(2) ಕಲೆಕ್ಟರನು, ಸಂಬಂಧಪಟ್ಟ ಪಕ್ಷಕಾರರಿಗೆ ತ್ವರಿತವಾಗಿ ಮತ್ತು ಯಾವುದೇ ಸಂದರ್ಭದಲ್ಲಿ ಐತೀರ್ಪಿನ ದಿನಾಂಕದಿಂದ ಹದಿನೈದು ದಿವಸದೊಳಗಾಗಿ ಐತೀರ್ಪಿನ ಪ್ರತಿಗಳನ್ನು ತಲುಪಿಸುವ ವ್ಯವಸ್ಥೆ ಮಾಡತಕ್ಕದ್ದು.

(3) ಈ ಪ್ರಕರಣದ ಮೇರೆಗೆ ಐತೀರ್ಪು ನೀಡಿರುವಾಗ,-

(ಎ) ಅಂಥ ಐತೀರ್ಪಿನ ಅನುಸಾರ ಯಾವುದೇ ಮೊಬಲಗನ್ನು ಸಂದಾಯ ಮಾಡಬೇಕಾಗಿರುವ ಮತ್ತು 4ನೇ ಪ್ರಕರಣದ (2ಬಿ) ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವಷ್ಟು ಮಟ್ಟಿಗೆ ಯಾವುದೇ ಮೊಬಲಗನ್ನು ವಿಮಾದಾರನು, ಐತೀರ್ಪಿನ ಪ್ರಕಟಣೆಯ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗಾಗಿ ಕಲೆಕ್ಟರನು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಆ ಮೊಬಲಗನ್ನು ಠೇವಣಿ ಇಡತಕ್ಕದ್ದು;

(ಬಿ) ಕಲೆಕ್ಟರನು ಅಂಥ ಐತೀರ್ಪಿನ ನಿಬಂಧನೆಗಳಿಗನುಸಾರ ಮತ್ತು 7ಎ ಪ್ರಕರಣದ ಮೇರೆಗಿನ ಸ್ಕೀಂ ಅನುಸಾರ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಆ ಸ್ಕೀಂನಲ್ಲಿ ನಿರ್ದಿಷ್ಟಪಡಿಸಿರಬಹುದಾದಂಥ ಮೊಬಲಗನ್ನು ಸಂದಾಯ ಮಾಡಲು ವ್ಯವಸ್ಥೆ ಮಾಡತಕ್ಕದ್ದು;

(ಸಿ) ಕಲೆಕ್ಟರನು ನಿರ್ದೇಶಿಸಬಹುದಾದ ಅಂಥ ಅವಧಿಯೊಳಗಾಗಿ ಮತ್ತು ಅಂಥ ರೀತಿಯಲ್ಲಿ ಮೊಬಲಗನ್ನು ಒಡೆಯನು ಠೇವಣಿ ಇಡತಕ್ಕದ್ದು.

(4) (1)ನೇ ಉಪಪ್ರಕರಣದ ಮೇರೆಗೆ ಯಾವುದೇ ವಿಚಾರಣೆ ನಡೆಸುವಲ್ಲಿ ಕಲೆಕ್ಟರನು, ಈ ಸಂಬಂಧದಲ್ಲಿ ರಚಿಸಿದ ಯಾವುವೇ ನಿಯಮಗಳಿಗೊಳಪಟ್ಟು, ತಾನು ವಿಹಿತವೆಂದು ಭಾವಿಸುವಂಥ ಕ್ಷಿಪ್ರ ಕಾರ್ಯವಿಧಾನವನ್ನು ಅನುಸರಿಸಬಹುದು.

(5) ಕಲೆಕ್ಟರನು, ಪ್ರಮಾಣ ಮಾಡಿಸಿ ಸಾಕ್ಷ್ಯ ತೆಗೆದುಕೊಳ್ಳಲು ಮತ್ತು ಸಾಕ್ಷಿದಾರರ ಹಾಜರಾತಿಯನ್ನು ಒತ್ತಾಯಪಡಿಸಲು ಮತ್ತು ದಸ್ತಾವೇಜುಗಳ ಮತ್ತು ಭೌತಿಕ ವಸ್ತುಗಳ ಶೋಧನೆ ಮತ್ತು ಹಾಜರಾತಿಯನ್ನು ಅಗತ್ಯಪಡಿಸುವ ಸಲುವಾಗಿ ಮತ್ತು ನಿಯಮಿಸಬಹುದಾದಂಥ ಇತರೆ ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯದ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಕಲೆಕ್ಟರನನ್ನು ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) 195ನೇ ಪ್ರಕರಣದ ಮತ್ತು XXVIನೇ ಅಧ್ಯಾಯದ ಎಲ್ಲ ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯವೆಂಬುದಾಗಿ ಭಾವಿಸತಕ್ಕದ್ದು.

(6) ವಿಮಾದಾರನು ಅಥವಾ (1)ನೇ ಉಪಪ್ರಕರಣದ ಮೇರೆಗೆ ಯಾರ ವಿರುದ್ಧ ಐತೀರ್ಪು ನೀಡಲಾಗಿದೆಯೋ ಆ ಒಡೆಯನು (3)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯೊಳಗಾಗಿ ಅಂಥ ಐತೀರ್ಪಿನ ಮೊಬಲಗನ್ನು ಠೇವಣಿ ಮಾಡಲು ತಪ್ಪಿದಲ್ಲಿ, ಅಂಥ ಮೊಬಲಗನ್ನು ಒಡೆಯನಿಂದ ಅಥವಾ ಸಂದರ್ಭಾನುಸಾರ, ವಿಮಾದಾರನಿಂದ ಭೂಕಂದಾಯದ ಬಾಕಿಯಂತೆ ಅಥವಾ ಸಾರ್ವಜನಿಕ ತಗಾದೆಯಂತೆ ವಸೂಲು ಮಾಡತಕ್ಕದ್ದು.

(7) ಯಾರೇ ವ್ಯಕ್ತಿಯ ಮರಣಕ್ಕೆ ಅಥವಾ ಅವನಿಗೆ ಉಂಟಾದ ಕ್ಷತಿಗೆ ಅಥವಾ ಯಾವುದೇ ಸ್ವತ್ತಿಗೆ ಉಂಟಾದ ಹಾನಿಗೆ ಸಂಬಂಧಿಸಿದ ಪರಿಹಾರದ ಬಗ್ಗೆ ಮಾಡಲಾದ ಕ್ಲೇಮನ್ನು ಸಾಧ್ಯವಾದಷ್ಟು ಬೇಗ ವಿಲೇವಾರಿ ಮಾಡತಕ್ಕದ್ದು ಮತ್ತು 6ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿನ ಪರಿಹಾರದ ಅರ್ಜಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗಾಗಿ ಅಂಥ ಕ್ಲೇಮನ್ನು ವಿಲೇವಾರಿ ಮಾಡಲು ಎಲ್ಲ ರೀತಿಯ ಪ್ರಯತ್ನವನ್ನು ಮಾಡತಕ್ಕದ್ದು.

(8) ಒಡೆಯನು ಐತೀರ್ಪಿನ ಯಾವುದೇ ಮೊಬಲಗಿನ ಬಗ್ಗೆ ತಾನು ಮಾಡಬೇಕಾದ ಸಂದಾಯವನ್ನು ತಪ್ಪಿಸುವ ಉದ್ದೇಶದಿಂದ ತನ್ನ ಸ್ವತ್ತನ್ನು ಸ್ಥಳಾಂತರಿಸುವ ಅಥವಾ ವಿಲೇವಾರಿ ಮಾಡುವ ಸಂಭವವಿರುವಲ್ಲಿ, ಕಲೆಕ್ಟರನು, ದಂಡ ಪ್ರಕ್ರಿಯಾ ಸಂಹಿತೆ, 1908ರ ಪ್ರಥಮ ಅನುಸೂಚಿಯ ಆದೇಶ XXXIXರ 1 ರಿಂದ 4ರ ವರೆಗಿನ ನಿಯಮಗಳ ಉಪಬಂಧಗಳ ಅನುಸಾರ ಅಂಥ ಕೃತ್ಯವನ್ನು ನಿಗ್ರಹಿಸುವುದಕ್ಕಾಗಿ ಒಂದು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಾಡಬಹುದು.

**7ಎ. ಪರಿಸರ ಪರಿಹಾರ ನಿಧಿಯ ಸ್ಥಾಪನೆ.-** (1) ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ, ಪರಿಸರ ಪರಿಹಾರ ನಿಧಿ ಎಂದು ಕರೆಯಲಾಗುವ ಒಂದು ನಿಧಿಯನ್ನು ಸ್ಥಾಪಿಸಬಹುದು.

(2) ಪರಿಹಾರ ನಿಧಿಯನ್ನು ಈ ಅಧಿನಿಯಮದ ಉಪಬಂಧಗಳ ಮತ್ತು (3)ನೇ ಉಪಪ್ರಕರಣದ ಮೇರೆಗಿನ ಸ್ಕೀಮಿನ ಅನುಸಾರ, 7ನೇ ಪ್ರಕರಣದ ಅಡಿಯಲ್ಲಿ ಕಲೆಕ್ಟರನು ಮಾಡಿದ ಐತೀರ್ಪಿನ ಮೇರೆಗೆ ಪರಿಹಾರವನ್ನು ಸಂದಾಯ ಮಾಡಲು ಬಳಸಿಕೊಳ್ಳತಕ್ಕದ್ದು.

(3) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಪರಿಹಾರ ನಿಧಿಯು ನಿಹಿತವಾಗಿರತಕ್ಕ ಪ್ರಾಧಿಕಾರ, ಪರಿಹಾರ ನಿಧಿಯ ಆಡಳಿತವನ್ನು ನಡೆಸತಕ್ಕ ರೀತಿ, ಪರಿಹಾರ ನಿಧಿಯಿಂದ ಹಣವನ್ನು ತೆಗೆದುಕೊಳ್ಳತಕ್ಕ ನಮೂನೆ ಮತ್ತು ರೀತಿ-ಇವುಗಳನ್ನು ಮತ್ತು ಪರಿಹಾರ ನಿಧಿಯ ಆಡಳಿತಕ್ಕೆ ಮತ್ತು ಆ ನಿಧಿಯಿಂದ ಮಾಡತಕ್ಕ ಪರಿಹಾರದ ಸಂದಾಯಕ್ಕೆ ಸಂಬಂಧಿಸಿದ ಅಥವಾ ಪ್ರಾಸಂಗಿಕವಾದ ಇತರ ಎಲ್ಲಾ ವಿಷಯಗಳನ್ನು ನಿರ್ದಿಷ್ಟಪಡಿಸಿ ಒಂದು ಸ್ಕೀಮನ್ನು ತಯಾರಿಸಬಹುದು.

**8. ಮರಣ, ಮೊದಲಾದವುಗಳಿಗಾಗಿ ನಷ್ಟ ಪರಿಹಾರವನ್ನು ಕ್ಲೇಮು ಮಾಡುವ ಇತರ ಹಕ್ಕುಗಳಿಗೆ ಸಂಬಂಧಪಟ್ಟ ಉಪಬಂಧಗಳು.-** (1) ಯಾರೇ ವ್ಯಕ್ತಿಯ ಮರಣ ಅಥವಾ ಅವನಿಗೆ ಉಂಟಾದ ಕ್ಷತಿ ಅಥವಾ ಯಾವುದೇ ಸ್ವತ್ತಿಗೆ ಉಂಟಾದ ಹಾನಿಯ ಸಂಬಂಧದಲ್ಲಿ 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗಿನ ಪರಿಹಾರವನ್ನು ಕ್ಲೇಮು ಮಾಡುವ ಹಕ್ಕು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ, ಆ ಸಂಬಂಧದಲ್ಲಿ ನಷ್ಟ ಪರಿಹಾರ ಕ್ಲೇಮು ಮಾಡುವುದಕ್ಕೆ ಇರುವ ಯಾವುದೇ ಇತರ ಹಕ್ಕಿಗೆ ಹೆಚ್ಚುವರಿಯಾಗಿ ಇರತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಯಾರೇ ವ್ಯಕ್ತಿಯ ಮರಣಕ್ಕೆ ಅಥವಾ ಅವನಿಗೆ ಉಂಟಾದ ಕ್ಷತಿಗೆ ಅಥವಾ ಯಾವುದೇ ಸ್ವತ್ತಿಗೆ ಉಂಟಾದ ಹಾನಿಗೆ ಸಂಬಂಧಿಸಿದಂತೆ ಪರಿಹಾರದ ಕ್ಲೇಮನ್ನು ಒದಗಿಸಲು ಬದ್ಧನಾಗಿರುವ ಒಡೆಯನು, ಯಾವುದೇ ಇತರ ಕಾನೂನಿನ ಅಡಿಯಲ್ಲಿ ನಷ್ಟ ಪರಿಹಾರ ಸಂದಾಯ ಮಾಡಲು ಕೂಡ ಬದ್ಧನಾಗಿರುವಲ್ಲಿ, ಅಂಥ ನಷ್ಟ ಪರಿಹಾರದ ಮೊಬಲಗಿನಿಂದ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ಪರಿಹಾರದ ಮೊಬಲಗನ್ನು ಕಳೆಯತಕ್ಕದ್ದು.

**9. ಮಾಹಿತಿ ತರಿಸಿಕೊಳ್ಳುವ ಅಧಿಕಾರ.-** ಕೇಂದ್ರ ಸರ್ಕಾರದಿಂದ ಅಧಿಕೃತನಾದ ಯಾರೇ ವ್ಯಕ್ತಿಯು, ಈ ಅಧಿನಿಯಮದ ಅಥವಾ ಯಾವುದೇ ನಿಯಮದ ಅಥವಾ ಈ ಅಧಿನಿಯಮದ ಅಡಿಯಲ್ಲಿ ನೀಡಲಾದ ಯಾವುದೇ ನಿರ್ದೇಶನದ ಅಗತ್ಯತೆಗಳನ್ನು ಪಾಲಿಸಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ ಆ ವ್ಯಕ್ತಿಯು ಅಗತ್ಯವೆಂದು ಯುಕ್ತವಾಗಿ ಭಾವಿಸಬಹುದಾದಂಥ ಮಾಹಿತಿಯನ್ನು ಸಲ್ಲಿಸುವಂತೆ ಯಾರೇ ಒಡೆಯನನ್ನು ಅಗತ್ಯಪಡಿಸಬಹುದು.

**10. ಪ್ರವೇಶಿಸುವ ಮತ್ತು ತಪಾಸಣೆ ಮಾಡುವ ಅಧಿಕಾರ.-** ಈ ಸಂಬಂಧದಲ್ಲಿ ಕೇಂದ್ರ ಸರ್ಕಾರದಿಂದ ಅಧಿಕೃತನಾದ ಯಾರೇ ವ್ಯಕ್ತಿಯು, ಈ ಅಧಿನಿಯಮದ ಅಥವಾ ಅದರ ಯಾವುದೇ ನಿಯಮದ ಅಥವಾ ಈ ಅಧಿನಿಯಮದ ಅಡಿಯಲ್ಲಿ ನೀಡಲಾದ ಯಾವುದೇ ನಿರ್ದೇಶನದ ಉಪಬಂಧಗಳನ್ನು ಪಾಲಿಸಲಾಗುತ್ತಿದೆಯೇ ಅಥವಾ ಪಾಲಿಸಲಾಗಿದೆಯೇ, ಇಲ್ಲವೇ ಎಂಬುದನ್ನು ನಿರ್ಧರಿಸುವ ಉದ್ದೇಶಕ್ಕಾಗಿ, ಅಪಾಯಕಾರಿ ವಸ್ತುಗಳನ್ನು ಬಳಸುವ ಯಾವುದೇ ಸ್ಥಳವನ್ನು, ಆವರಣವನ್ನು ಅಥವಾ ವಾಹನವನ್ನು ತಪಾಸಣೆ ಮಾಡಲು ತಾನು ಅವಶ್ಯವೆಂದು ಭಾವಿಸುವಂಥ ನೆರವಿನೊಂದಿಗೆ ಎಲ್ಲ ಯುಕ್ತ ವೇಳೆಗಳಲ್ಲಿ ಪ್ರವೇಶಿಸುವ ಹಕ್ಕನ್ನು ಹೊಂದಿರತಕ್ಕದ್ದು ಮತ್ತು ಅಂಥ ಒಡೆಯನು ಅಂಥ ವ್ಯಕ್ತಿಗೆ ಎಲ್ಲಾ ನೆರವನ್ನು ಒದಗಿಸಲು ಬದ್ಧನಾಗಿರತಕ್ಕದ್ದು.

**11. ಶೋಧಿಸುವ ಮತ್ತು ಅಭಿಗ್ರಹಿಸುವ ಅಧಿಕಾರ.-** (1) ಈ ಸಂಬಂಧವಾಗಿ ಕೇಂದ್ರ ಸರ್ಕಾರದಿಂದ ಅಧಿಕಾರ ಪಡೆದ ಯಾರೇ ವ್ಯಕ್ತಿಯು, 4ನೇ ಪ್ರಕರಣದ (1)ನೇ ಉಪಪ್ರಕರಣವನ್ನು ಉಲ್ಲಂಘಿಸಿ ಯಾವುದೇ ಸ್ಥಳ, ಆವರಣ ಅಥವಾ ವಾಹನದಲ್ಲಿ ಯಾವುದೇ ಅಪಾಯಕಾರಿ ವಸ್ತುವನ್ನು ನಿರ್ವಹಿಸಲಾಗುತ್ತಿದೆ ಎಂದು ನಂಬಲು ಕಾರಣಗಳಿದ್ದರೆ, ಹಾಗೆ ಅಂಥ ಅಪಾಯಕಾರಿ ವಸ್ತುವನ್ನು ನಿರ್ವಹಿಸುತ್ತಿರುವ ಸ್ಥಳವನ್ನು, ಆವರಣವನ್ನು ಪ್ರವೇಶಿಸಬಹುದು ಅಥವಾ ವಾಹನವನ್ನು ಶೋಧಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಶೋಧನೆಯ ಫಲವಾಗಿ ಯಾವ ಅಪಾಯಕಾರಿ ವಸ್ತುವಿನ ಬಳಕೆಗೆ ಸಂಬಂಧಿಸಿದಂತೆ 4ನೇ ಪ್ರಕರಣದ (1)ನೇ ಉಪಪ್ರಕರಣದ ಉಲ್ಲಂಘನೆಯಾಗಿದೆಯೋ ಅಂಥ ಯಾವುದೇ ಅಪಾಯಕಾರಿ ವಸ್ತುವಿನ ಬಳಕೆಯು ಕಂಡುಬಂದಾಗ, ಅವನು ಅಪಾಯಕಾರಿ ವಸ್ತುವನ್ನು ಅವನ ಅಭಿಪ್ರಾಯದಲ್ಲಿ ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಗೆ ಉಪಯುಕ್ತವಾಗುವ ಅಥವಾ ಸುಸಂಗತವಾಗುವ ಇತರ ವಸ್ತುಗಳನ್ನು ಅಭಿಗ್ರಹಿಸಬಹುದು:

ಪರಂತು, ಯಾವುದೇ ಅಂಥ ವಸ್ತು ಅಥವಾ ಪದಾರ್ಥವನ್ನು ಅಭಿಗ್ರಹಣ ಮಾಡಲು ಕಾರ್ಯಸಾಧ್ಯವಾಗದಿದ್ದಲ್ಲಿ, ಆ ವ್ಯಕ್ತಿಯ ಪೂರ್ವಾನುಮೋದನೆ ಪಡೆದ ಹೊರತು, ಆ ಒಡೆಯನು ಯಾವುದೇ ಅಂಥ ಅಪಾಯಕಾರಿ ವಸ್ತುವನ್ನು ಮತ್ತು ಇತರೆ ಪದಾರ್ಥಗಳನ್ನು ಸ್ಥಳಾಂತರಿಸತಕ್ಕದ್ದಲ್ಲ ಅಥವಾ ಬಿಟ್ಟುಕೊಡತಕ್ಕದ್ದಲ್ಲ ಅಥವಾ ಅವುಗಳ ಸಂಬಂಧದಲ್ಲಿ ಅನ್ಯಥಾ ವ್ಯವಹರಿಸತಕ್ಕದ್ದಲ್ಲ ಎಂದು ಅವನಿಗೆ ಒಂದು ಆದೇಶವನ್ನು ಜಾರಿಗೊಳಿಸಬಹುದು.

(3) ಅವನು (2)ನೇ ಉಪಪ್ರಕರಣದ ಮೇರೆಗೆ ಅಭಿಗ್ರಹಣ ಮಾಡಿದ ಅಪಾಯಕಾರಿ ವಸ್ತುವನ್ನು, ಅಪಘಾತವನ್ನು ತಪ್ಪಿಸುವ ಸಲುವಾಗಿ ವಿಲೇವಾರಿ ಮಾಡುವುದು ಯುಕ್ತವೆಂದು ನಂಬಲು ಕಾರಣಗಳಿದ್ದರೆ, ತಾನು ಸೂಕ್ತವೆಂದು ಭಾವಿಸುವ ರೀತಿಯಲ್ಲಿ ಆ ಕೂಡಲೇ ಹಾಗೆ ವಿಲೇವಾರಿ ಮಾಡಬಹುದು.

(4) (3)ನೇ ಉಪಪ್ರಕರಣದ ಮೇರೆಗೆ ಅಪಾಯಕಾರಿ ವಸ್ತುವಿನ ವಿಲೇವಾರಿಗಾಗಿ ವಹಿಸಿದ ಎಲ್ಲಾ ವೆಚ್ಚಗಳನ್ನು ಒಡೆಯನಿಂದ ಭೂಕಂದಾಯ ಬಾಕಿಯಂತೆ ಅಥವಾ ಸಾರ್ವಜನಿಕ ತಗಾದೆಯಂತೆ ವಸೂಲಿ ಮಾಡಲು ಅವಕಾಶವಿರತಕ್ಕದ್ದು.

**12. ನಿರ್ದೇಶನಗಳನ್ನು ನೀಡುವ ಅಧಿಕಾರ.-** ಯಾವುದೇ ಇತರೆ ಕಾನೂನಿನಲ್ಲಿ ಏನೇ ಇದ್ದರೂ, ಮತ್ತು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ತನ್ನ ಅಧಿಕಾರಗಳನ್ನು

ಚಲಾಯಿಸುವಲ್ಲಿ, ಮತ್ತು ತನ್ನ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ ಯಾರೇ ಒಡೆಯ ಅಥವಾ ಯಾರೇ ವ್ಯಕ್ತಿ, ಅಧಿಕಾರಿ, ಪ್ರಾಧಿಕಾರ ಅಥವಾ ಏಜೆನ್ಸಿಗೆ ಈ ಅಧಿನಿಯಮದ ಉದ್ದೇಶಗಳಿಗಾಗಿ ತಾನು ಯುಕ್ತವೆಂದು ಭಾವಿಸುವ ರೀತಿಯಲ್ಲಿ ಲಿಖಿತ ನಿರ್ದೇಶನಗಳನ್ನು ನೀಡಬಹುದು ಮತ್ತು ಅಂಥ ಒಡೆಯ, ವ್ಯಕ್ತಿ, ಅಧಿಕಾರಿ, ಪ್ರಾಧಿಕಾರ ಅಥವಾ ಏಜೆನ್ಸಿಯು ಅಂಥ ನಿರ್ದೇಶನಗಳನ್ನು ಪಾಲಿಸಲು ಬದ್ಧರಾಗಿರತಕ್ಕದ್ದು.

**ವಿವರಣೆ.**- ಸಂದೇಹಗಳ ನಿವಾರಣೆಗಾಗಿ ಈ ಪ್ರಕರಣದ ಅಡಿಯಲ್ಲಿ ನಿರ್ದೇಶನಗಳನ್ನು ನೀಡುವ ಅಧಿಕಾರವು ಈ ಮುಂದಿನವುಗಳನ್ನು ನಿರ್ದೇಶಿಸುವ ಅಧಿಕಾರವನ್ನು ಒಳಗೊಳ್ಳುತ್ತದೆಯೆಂದು ಈ ಮೂಲಕ ಘೋಷಿಸಲಾಗಿದೆ-

(ಎ) ಯಾವುದೇ ಅಪಾಯಕಾರಿ ವಸ್ತುವಿನ ನಿರ್ವಹಣೆಯನ್ನು ನಿಷೇಧಿಸುವುದು ಅಥವಾ ವಿನಿಯಮಿಸುವುದು; ಅಥವಾ

(ಬಿ) ವಿದ್ಯುಚ್ಛಕ್ತಿ, ನೀರು ಅಥವಾ ಯಾವುದೇ ಇತರೆ ಸೇವೆಗಳ ಸರಬರಾಜನ್ನು ನಿಲ್ಲಿಸುವುದು ಅಥವಾ ವಿನಿಯಮಿಸುವುದು.

**13. ಅಪಾಯಕಾರಿ ವಸ್ತುಗಳನ್ನು ನಿರ್ವಹಿಸದಂತೆ ಒಡೆಯನನ್ನು ನಿಗ್ರಹಿಸಲು ನ್ಯಾಯಾಲಯಗಳಿಗೆ ಅರ್ಜಿಸಲ್ಲಿಸುವ ಅಧಿಕಾರ.**- (1) ಕೇಂದ್ರ ಸರ್ಕಾರವು ಅಥವಾ ಈ ಸಂಬಂಧವಾಗಿ ಆ ಸರ್ಕಾರದಿಂದ ಅಧಿಕೃತನಾದ ಯಾರೇ ವ್ಯಕ್ತಿಯು, ಯಾರೇ ಒಡೆಯನು ಈ ಅಧಿನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘಿಸಿ ಯಾವುದೇ ಅಪಾಯಕಾರಿ ವಸ್ತುವನ್ನು ಬಳಸುತ್ತಿದ್ದಾನೆಂದು ನಂಬಲು ಕಾರಣಗಳಿದ್ದರೆ, ಆ ಸರ್ಕಾರ ಅಥವಾ ಸಂದರ್ಭಾನುಸಾರ ಆ ವ್ಯಕ್ತಿಯು, ಅಂಥ ಒಡೆಯನನ್ನು ಹಾಗೆ ಬಳಸದಂತೆ ನಿಗ್ರಹಿಸುವುದಕ್ಕಾಗಿ ಮಹಾನಗರ ಮ್ಯಾಜಿಸ್ಟ್ರೇಟನ ಅಥವಾ ಪ್ರಥಮ ದರ್ಜೆನ್ಯಾಯಿಕ ಮ್ಯಾಜಿಸ್ಟ್ರೇಟನ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ನ್ಯಾಯಾಲಯಕ್ಕೆ ಅರ್ಜಿಸಲ್ಲಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಅರ್ಜಿ ಸ್ವೀಕರಿಸಿದ ಮೇಲೆ ನ್ಯಾಯಾಲಯವು ತಾನು ಸೂಕ್ತವೆಂದು ಭಾವಿಸುವಂಥ ಆದೇಶ ಮಾಡಬಹುದು.

(3) ಅಪಾಯಕಾರಿ ವಸ್ತುವನ್ನು ನಿರ್ವಹಿಸದಂತೆ ಯಾರೇ ಒಡೆಯನನ್ನು ನಿಗ್ರಹಿಸಲು (2)ನೇ ಉಪಪ್ರಕರಣದ ಅಡಿಯಲ್ಲಿ ನ್ಯಾಯಾಲಯವು ಒಂದು ಆದೇಶವನ್ನು ಮಾಡಿರುವಲ್ಲಿ, ಅದು ಆ ಆದೇಶದಲ್ಲಿ-

(ಎ) ಹಾಗೆ ನಿರ್ವಹಿಸುವುದನ್ನು ಬಿಟ್ಟುಬಿಡುವಂತೆ ಅಂಥ ಒಡೆಯನಿಗೆ ನಿರ್ದೇಶನ ನೀಡಬಹುದು;

(ಬಿ) (ಎ) ಖಂಡದ ಅಡಿಯಲ್ಲಿ ಅಂಥ ನಿರ್ದೇಶನವನ್ನು, ಯಾವ ಒಡೆಯನಿಗೆ ನೀಡಲಾಗಿತ್ತೋ ಆ ಒಡೆಯನು ಅಂಥ ನಿರ್ದೇಶನವನ್ನು ಪಾಲಿಸದಿರುವಲ್ಲಿ, ತಾನು ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಆ ನಿರ್ದೇಶನವನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರವನ್ನು ಅಥವಾ ಸಂದರ್ಭಾನುಸಾರ, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ವ್ಯಕ್ತಿಯನ್ನು ಅಧಿಕೃತಗೊಳಿಸಬಹುದು.

(4) ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ (3)ನೇ ಉಪಪ್ರಕರಣದ (ಬಿ) ಖಂಡದ ಅಡಿಯಲ್ಲಿ ನ್ಯಾಯಾಲಯದ ನಿರ್ದೇಶನಗಳನ್ನು ಜಾರಿಗೊಳಿಸುವ ವ್ಯಕ್ತಿಯು ವಹಿಸಿದ ಎಲ್ಲ ವೆಚ್ಚಗಳನ್ನು, ಒಡೆಯನಿಂದ ಭೂಕಂದಾಯದ ಬಾಕಿಯಂತೆ ಅಥವಾ ಸಾರ್ವಜನಿಕ ತಗಾದೆಯಂತೆ ವಸೂಲು ಮಾಡತಕ್ಕದ್ದು.

**14. 4ನೇ ಪ್ರಕರಣದ (1)ನೇ ಉಪಪ್ರಕರಣವನ್ನು ಅಥವಾ (2)ನೇ ಉಪಪ್ರಕರಣವನ್ನು ಉಲ್ಲಂಘಿಸಿದ್ದಕ್ಕಾಗಿ ಅಥವಾ 12ನೇ ಪ್ರಕರಣದ ಮೇರೆಗಿನ ನಿರ್ದೇಶನಗಳನ್ನು ಪಾಲಿಸಲು ತಪ್ಪಿದ್ದಕ್ಕಾಗಿ ದಂಡ.**- (1) ಯಾರೇ ಆಗಲಿ, 4ನೇ ಪ್ರಕರಣದ (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದ ಅಥವಾ (2ಎ) ಉಪಪ್ರಕರಣ ಅಥವಾ (2ಸಿ) ಉಪಪ್ರಕರಣದ ಯಾವುದೇ ಉಪಬಂಧಗಳನ್ನು ಉಲ್ಲಂಘಿಸಿದರೆ ಅಥವಾ 12ನೇ ಪ್ರಕರಣದ ಮೇರೆಗೆ ನೀಡಲಾದ ಯಾವುದೇ ನಿರ್ದೇಶನವನ್ನು ಪಾಲಿಸಲು ತಪ್ಪಿದರೆ, ಅವನು ಒಂದು ವರ್ಷ ಮತ್ತು ಆರು ತಿಂಗಳಿಗಿಂತ ಕಡಿಮೆ ಇಲ್ಲದಂಥ, ಆದರೆ ಆರು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಇಲ್ಲದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(2) ಯಾರೇ ಆಗಲಿ (1)ನೇ ಉಪಪ್ರಕರಣದ ಮೇರೆಗೆ ಒಂದು ಅಪರಾಧದ ಬಗ್ಗೆ ಅಪರಾಧಿಯೆಂದು ಈಗಾಗಲೇ ನಿರ್ಣೀತನಾಗಿದ್ದು ಎರಡನೆಯ ಅಪರಾಧ ಅಥವಾ ಎರಡನೆಯ ಅಪರಾಧದ ತರುವಾಯದ ಯಾವುದೇ ಅಪರಾಧದ ಬಗ್ಗೆ ಅಪರಾಧಿಯೆಂದು ನಿರ್ಣೀತನಾದರೆ, ಅವನು ಎರಡು ವರ್ಷಗಳಿಗಿಂತ ಕಡಿಮೆಯಿಲ್ಲದಂಥ ಆದರೆ, ಏಳು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಮತ್ತು ಒಂದು ಲಕ್ಷ ರೂಪಾಯಿಗಿಂತ ಕಡಿಮೆ ಇಲ್ಲದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(3) ಈ ಅಧಿನಿಯಮದ ಮೇರೆಗಿನ ಒಂದು ಅಪರಾಧದ ಬಗ್ಗೆ ಅಪರಾಧಿಯೆಂದು ನಿರ್ಣೀತನಾಗಿರುವ ವ್ಯಕ್ತಿಯು ಹದಿನೆಂಟು ವರ್ಷಕ್ಕಿಂತ ಕಡಿಮೆ ವಯಸ್ಸಿನವನಾಗಿದ್ದ ಹೊರತು, ಅವನಿಗೆ ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ

360ನೇ ಪ್ರಕರಣದಲ್ಲಿ ಅಥವಾ ಅಪರಾಧಿಗಳ ಪರಿವೀಕ್ಷಣೆ ಅಧಿನಿಯಮ, 1958 (1958ರ 20)ರಲ್ಲಿ ಇರುವುದು ಯಾವುದೂ ಅನ್ವಯಿಸತಕ್ಕದ್ದಲ್ಲ.

**15. 9ನೇ ಪ್ರಕರಣದ ಮೇರೆಗೆ ನೀಡಿದ ನಿರ್ದೇಶನವನ್ನು ಅಥವಾ 11ನೇ ಪ್ರಕರಣದ ಮೇರೆಗಿನ ಆದೇಶವನ್ನು ಪಾಲಿಸಲು ತಪ್ಪಿದ್ದಕ್ಕಾಗಿ ಅಥವಾ 10 ಅಥವಾ 11ನೇ ಪ್ರಕರಣಗಳ ಮೇರೆಗಿನ ಪ್ರಕಾರ್ಯಗಳನ್ನು ನಿರ್ವಹಿಸುವ ಯಾರೇ ವ್ಯಕ್ತಿಗೆ ಅಡ್ಡಿಯನ್ನುಂಟು ಮಾಡಿದ್ದಕ್ಕಾಗಿ ದಂಡ.**- ಯಾರೇ ಒಡೆಯನು 9ನೇ ಪ್ರಕರಣದ ಮೇರೆಗೆ ನೀಡಲಾದ ನಿರ್ದೇಶನವನ್ನು ಅಥವಾ 11ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನೀಡಲಾದ ಆದೇಶವನ್ನು ಪಾಲಿಸಲು ತಪ್ಪಿದರೆ ಅಥವಾ 10ನೇ ಪ್ರಕರಣದ ಅಥವಾ 11ನೇ ಪ್ರಕರಣದ (1)ನೇ ಉಪಪ್ರಕರಣ ಅಥವಾ (3)ನೇ ಉಪಪ್ರಕರಣದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವ ಯಾರೇ ವ್ಯಕ್ತಿಗೆ ಅಡ್ಡಿಯುಂಟು ಮಾಡಿದರೆ, ಅವನು ಮೂರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ, ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ, ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**16. ಕಂಪನಿಗಳಿಂದ ಅಪರಾಧಗಳು.**- (1) ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ, ಆ ಅಪರಾಧವು ನಡೆದ ಸಮಯದಲ್ಲಿ ನೇರವಾಗಿ ಕಂಪನಿಯ ಪ್ರಭಾರ ಹೊಂದಿದ್ದ, ಮತ್ತು ಅದರ ವ್ಯವಹಾರಗಳನ್ನು ನಡೆಸುವುದಕ್ಕಾಗಿ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು, ಆ ಅಪರಾಧದ ತಪ್ಪಿತಸ್ಥನೆಂಬುದಾಗಿ ಭಾವಿಸತಕ್ಕದ್ದು ಮತ್ತು ಆ ಪ್ರಕಾರ ಅವನು ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು:

ಪರಂತು, ಈ ಉಪ ಪ್ರಕರಣದಲ್ಲಿರುವುದು ಯಾವುದೂ, ಅಂಥ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ತಾನು ಎಲ್ಲಾ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ಅಂಥ ಯಾರೇ ವ್ಯಕ್ತಿಯು ರುಜುವಾತುಪಡಿಸಿದರೆ, ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ದಂಡನೆಗೆ ಅವನನ್ನು ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ರುಜುವಾತಾದರೆ, ಅಥವಾ ಅವನ ಯಾವುದೇ ನಿರ್ಲಕ್ಷ್ಯತೆಯಿಂದ ನಡೆಯಿತೆಂದು ಹೇಳಬಹುದಾಗಿರುವಲ್ಲಿ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥರೆಂಬುದಾಗಿ ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗಲು ಬದ್ಧನಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು.

**ವಿವರಣೆ.**- ಈ ಪ್ರಕರಣದ ಉದ್ದೇಶಕ್ಕಾಗಿ,-

(ಎ) “ಕಂಪನಿ” ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಅದು ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ;

(ಬಿ) ಒಂದು ಫರ್ಮ್‌ನ ಸಂಬಂಧದಲ್ಲಿ “ನಿರ್ದೇಶಕ” ಎಂದರೆ ಆ ಫರ್ಮ್‌ನ ಒಬ್ಬ ಪಾಲುದಾರ.

**17. ಸರ್ಕಾರಿ ಇಲಾಖೆಗಳಿಂದ ಸಂಭವಿಸುವ ಅಪರಾಧಗಳು.**- ಈ ಅಧಿನಿಯಮದ ಅಡಿಯಲ್ಲಿ ಒಂದು ಅಪರಾಧವನ್ನು ಸರ್ಕಾರದ ಯಾವುದೇ ಇಲಾಖೆಯು ಮಾಡಿರುವಲ್ಲಿ, ಆ ಇಲಾಖೆಯ ಮುಖ್ಯಸ್ಥನನ್ನು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧದ ಕಾನೂನು ಕ್ರಮಕ್ಕೆ ಗುರಿಯಾಗಲು ಮತ್ತು ತದನುಸಾರವಾಗಿ ದಂಡಿತನಾಗಲು ಬದ್ಧನಾಗಿರತಕ್ಕದ್ದು:

ಪರಂತು, ಅಂಥ ಇಲಾಖೆಯ ಮುಖ್ಯಸ್ಥನು, ಆ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಯಲು ತಾನು ಎಲ್ಲ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ರುಜುವಾತುಪಡಿಸಿದರೆ, ಈ ಪ್ರಕರಣದಲ್ಲಿರುವುದು ಯಾವುದೂ ಅವನನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

**18. ಅಪರಾಧಗಳ ಸಂಜ್ಞಾನ.**- ಯಾವುದೇ ನ್ಯಾಯಾಲಯವು, ಈ ಕೆಳಕಂಡವರು ಸಲ್ಲಿಸಿದ ದೂರಿನ ಮೇಲೆ ಹೊರತು, ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧದ ಸಂಜ್ಞಾನವನ್ನು ತೆಗೆದುಕೊಳ್ಳತಕ್ಕದ್ದಲ್ಲ-

(ಎ) ಕೇಂದ್ರ ಸರ್ಕಾರ ಅಥವಾ ಯಾವುದೇ ಪ್ರಾಧಿಕಾರ ಅಥವಾ ಆ ಸರ್ಕಾರವು ಈ ಬಗ್ಗೆ ಅಧಿಕೃತಗೊಳಿಸಿದ ಅಧಿಕಾರಿ; ಅಥವಾ

(ಬಿ) ಆರೋಪಿತ ಅಂಥ ಅಪರಾಧದ ಬಗ್ಗೆ ಮತ್ತು ದೂರು ಸಲ್ಲಿಸುವ ತನ್ನ ಉದ್ದೇಶದ ಬಗ್ಗೆ ಕೇಂದ್ರ ಸರ್ಕಾರಕ್ಕೆ ಅಥವಾ ಪ್ರಾಧಿಕಾರಕ್ಕೆ ಅಥವಾ ಮೇಲೆ ಹೇಳಿದಂತೆ ಅಧಿಕೃತನಾದ ಅಧಿಕಾರಿಗೆ ನಿಯಮಿಸಲಾದ ರೀತಿಯಲ್ಲಿ ಅರವತ್ತು ದಿನಗಳಿಗೆ ಕಡಿಮೆ ಇಲ್ಲದ ಅವಧಿಯ ನೋಟಿಸನ್ನು ನೀಡಿದ ಯಾರೇ ವ್ಯಕ್ತಿ.

**19. ಪ್ರತ್ಯಾಯೋಜಿಸುವುದಕ್ಕೆ ಅಧಿಕಾರ.-** ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತು ಮತ್ತು ಮಿತಿಗಳಿಗೊಳಪಟ್ಟು, ತಾನು ಅವಶ್ಯವೆಂದು ಅಥವಾ ಯುಕ್ತವೆಂದು ಭಾವಿಸಬಹುದಾದಂತೆ ಈ ಅಧಿನಿಯಮದ ಮೇರೆಗಿನ ಅದರ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು (23ನೇ ಪ್ರಕರಣದ ಮೇರೆಗಿನ ಅಧಿಕಾರದ ಹೊರತು) ಯಾರೇ ವ್ಯಕ್ತಿಗೆ (ಯಾರೇ ಅಧಿಕಾರಿ, ಪ್ರಾಧಿಕಾರ ಅಥವಾ ಇತರ ಏಜೆನ್ಸಿಯೂ ಸೇರಿದಂತೆ) ಪ್ರತ್ಯಾಯೋಜಿಸಬಹುದು.

**20. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ.-** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಅಥವಾ ಅದರ ಮೇರೆಗೆ ಹೊರಡಿಸಿದ ಆದೇಶ ಅಥವಾ ನಿರ್ದೇಶನಗಳ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಸರ್ಕಾರ ಅಥವಾ ವ್ಯಕ್ತಿ, ಅಧಿಕಾರಿ, ಪ್ರಾಧಿಕಾರ ಅಥವಾ ಇತರ ಏಜೆನ್ಸಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**21. ಸಲಹಾ ಸಮಿತಿ.-** (1) ಕೇಂದ್ರ ಸರ್ಕಾರವು, ಕಾಲಕಾಲಕ್ಕೆ ಈ ಅಧಿನಿಯಮದ ಮೇರೆಗೆ ವಿಮಾ ಪಾಲಿಸಿಗೆ ಸಂಬಂಧಿಸಿದ ವಿಷಯಗಳ ಕುರಿತು ಒಂದು ಸಲಹಾ ಸಮಿತಿಯನ್ನು ರಚಿಸಬಹುದು.

(2) ಸಲಹಾ ಸಮಿತಿಯು ಈ ಕೆಳಕಂಡವರನ್ನು ಒಳಗೊಂಡಿರತಕ್ಕದ್ದು:-

(ಎ) ಕೇಂದ್ರ ಸರ್ಕಾರವನ್ನು ಪ್ರತಿನಿಧಿಸುವಂಥ ಮೂವರು ಅಧಿಕಾರಿಗಳು;

(ಬಿ) ವಿಮಾದಾರರನ್ನು ಪ್ರತಿನಿಧಿಸುವಂಥ ಇಬ್ಬರು ವ್ಯಕ್ತಿಗಳು;

(ಸಿ) ಮಾಲೀಕರನ್ನು ಪ್ರತಿನಿಧಿಸುವಂಥ ಇಬ್ಬರು ವ್ಯಕ್ತಿಗಳು; ಮತ್ತು

(ಡಿ) ವಿಮಾ ಅಥವಾ ಅಪಾಯಕಾರಿ ವಸ್ತುಗಳ ಪರಿಣಿತರ ಪೈಕಿಯಿಂದ ಕೇಂದ್ರ ಸರ್ಕಾರವು ನೇಮಕ ಮಾಡಬೇಕಾದ ಇಬ್ಬರು ವ್ಯಕ್ತಿಗಳು.

(3) ಕೇಂದ್ರ ಸರ್ಕಾರವನ್ನು ಪ್ರತಿನಿಧಿಸುವ ಸದಸ್ಯರ ಪೈಕಿ ಆ ಸರ್ಕಾರವು ಈ ಸಂಬಂಧವಾಗಿ ನಾಮನಿರ್ದೇಶನ ಮಾಡಿದ ಒಬ್ಬ ಸದಸ್ಯನು ಸಲಹಾ ಸಮಿತಿಯ ಅಧ್ಯಕ್ಷನಾಗಿರತಕ್ಕದ್ದು.

**22. ಇತರೆ ಕಾನೂನುಗಳ ಪರಿಣಾಮ.-** ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಉಪಬಂಧಗಳು ಯಾವುದೇ ಇತರೆ ಕಾನೂನಿನಲ್ಲಿ ಅದಕ್ಕೆ ಅಸಂಗತವಾಗಿರುವುದು ಏನೇ ಇದ್ದಾಗ್ಯೂ ಪರಿಣಾಮ ಹೊಂದಿರತಕ್ಕದ್ದು.

**23. ನಿಯಮ ರಚನಾಧಿಕಾರ.-** (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳಲ್ಲಿ ಈ ಮುಂದಿನ ಎಲ್ಲ ವಿಷಯಗಳ ಅಥವಾ ಅವುಗಳ ಪೈಕಿ ಯಾವುದೇ ವಿಷಯದ ಬಗ್ಗೆ ಉಪಬಂಧಿಸಬಹುದು, ಎಂದರೆ:-

(ಎ) 4ನೇ ಪ್ರಕರಣದ (2ಎ) ಉಪಪ್ರಕರಣದ ಮೇರೆಗೆ ಒಬ್ಬ ಒಡೆಯನು ತೆಗೆದುಕೊಳ್ಳಬಹುದಾದ ವಿಮಾ ಪಾಲಿಸಿಯ ಗರಿಷ್ಠ ಮೊಬಲಗು;

(ಎಎ) 4ನೇ ಪ್ರಕರಣದ (2ಸಿ) ಉಪಪ್ರಕರಣದ ಮೇರೆಗೆ ಪರಿಹಾರ ನಿಧಿಗೆ ಜಮೆ ಮಾಡುವುದಕ್ಕಾಗಿ ಪ್ರತಿಯೊಬ್ಬ ಒಡೆಯನು ಸಂದಾಯ ಮಾಡಬೇಕಾದ ಮೊಬಲಗು;

(ಎಬಿ) ಒಡೆಯನಿಂದ ಸ್ವೀಕರಿಸಿದ ಮೊಬಲಗನ್ನು 4ನೇ ಪ್ರಕರಣದ (2ಡಿ) ಉಪಪ್ರಕರಣದ ಮೇರೆಗೆ ವಿಮಾದಾರನು ಯಾವ ರೀತಿಯಲ್ಲಿ ಮತ್ತು ಯಾವ ಅವಧಿಯೊಳಗೆ ಸಂದಾಯ ಮಾಡತಕ್ಕದ್ದೋ ಆ ರೀತಿ ಮತ್ತು ಅವಧಿ;

(ಎಸಿ) 4ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ನಿಧಿಯ ಸ್ಥಾಪನೆ ಮತ್ತು ನಿರ್ವಹಣೆ;

(ಬಿ) ಅರ್ಜಿಯ ನಮೂನೆ ಮತ್ತು ಅದರಲ್ಲಿ ನೀಡಬೇಕಾದ ವಿವರಗಳು ಮತ್ತು 6ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅಂಥ ಅರ್ಜಿಗೆ ಲಗತ್ತಿಸಬೇಕಾದ ದಸ್ತಾವೇಜುಗಳು;

(ಸಿ) 7ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ವಿಚಾರಣೆ ನಡೆಸುವ ವಿಧಾನ;

(ಡಿ) ಕಲೆಕ್ಟರನು 7ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಯಾವ ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಹೊಂದಿರತಕ್ಕದ್ದೋ ಆ ಉದ್ದೇಶಗಳು;

(ಇ) 18ನೇ ಪ್ರಕರಣದ (2ಎ) ಖಂಡದ ಮೇರೆಗೆ ಕೇಂದ್ರ ಸರ್ಕಾರಕ್ಕೆ ಅಪರಾಧದ ಬಗ್ಗೆ ಮತ್ತು ಆ ಕುರಿತು ದೂರು ಸಲ್ಲಿಸುವ ಉದ್ದೇಶದ ಬಗ್ಗೆ ನೋಟೀಸು ನೀಡತಕ್ಕ ರೀತಿ;

(ಎಫ್) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದಂಥ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅಥವಾ ಸ್ಕೀಮನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು, ಮತ್ತು ಅದನ್ನು ಹಾಗೆ ಇಡಲಾದ ಮೇಲೆ ಹೇಳಿದ ಅಧಿವೇಶನದ ಅಥವಾ ನಿರಂತರ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ನಿಯಮದಲ್ಲಿ ಅಥವಾ ಸ್ಕೀಮಿನಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಅಥವಾ ಸ್ಕೀಮನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಅಥವಾ ಸ್ಕೀಂ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮ ಅಥವಾ ಸ್ಕೀಮಿನ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

## ಅನುಸೂಚಿ

(3)(1)ನೇ ಪ್ರಕರಣ ನೋಡಿ)

(i) ವಹಿಸಲಾದ ವೈದ್ಯಕೀಯ ವೆಚ್ಚಗಳನ್ನು ಪ್ರತಿ ಸಂದರ್ಭದಲ್ಲಿ ಗರಿಷ್ಠ 12,500 ರೂಪಾಯಿಗಳವರೆಗೆ ತುಂಬಿ ಕೊಡುವುದು.

(ii) ಮಾರಣಾಂತಿಕ ಅಪಘಾತಗಳಿಗಾಗಿ, ಮೃತನ ಬಗ್ಗೆ ವಹಿಸಲಾದ ವೈದ್ಯಕೀಯ ವೆಚ್ಚಗಳೇನಾದರೂ ಇದ್ದರೆ, 12,500 ರೂಪಾಯಿಗಳ ಗರಿಷ್ಠ ಮಿತಿಯವರೆಗೆ ಅವುಗಳನ್ನು ತುಂಬಿಕೊಡುವುದಲ್ಲದೆ ಪ್ರತಿ ವ್ಯಕ್ತಿಗೆ 25,000 ರೂಪಾಯಿ ಪರಿಹಾರ ನೀಡುವುದು.

(iii) ಪೂರ್ಣ ಶಾಶ್ವತ ಅಥವಾ ಭಾಗಶಃ ಶಾಶ್ವತ ಅಂಗವಿಕಲತೆ ಅಥವಾ ಇತರ ಗಾಯ ಅಥವಾ ಕಾಯಿಲೆಗಳ ಸಲುವಾಗಿ, (ಎ) ಪ್ರತಿಯೊಂದು ಪ್ರಕರಣದಲ್ಲಿ ವಹಿಸಿದ ವೈದ್ಯಕೀಯ ವೆಚ್ಚಗಳೇನಾದರೂ ಇದ್ದರೆ 12,500 ರೂ. ಗರಿಷ್ಠಮಿತಿಯವರೆಗೆ ಅವುಗಳನ್ನು ತುಂಬಿಕೊಡುವುದು ಮತ್ತು (ಬಿ) ಒಬ್ಬ ಅಧಿಕೃತ ವೈದ್ಯನು ಪ್ರಮಾಣೀಕರಿಸಿದಂತೆ ಅಂಗವಿಕಲತೆಯ ಶೇಕಡಾವಾರನ್ನು ಆಧರಿಸಿ ನಗದು ಪರಿಹಾರ ನೀಡುವುದು. ಪೂರ್ಣ ಶಾಶ್ವತ ಅಂಗವಿಕಲತೆಗಾಗಿ ಪರಿಹಾರವು 25,000 ರೂ. ಆಗಿರತಕ್ಕದ್ದು.

(iv) ಅಪಘಾತಕ್ಕೆ ಒಳಗಾದವನ ಗಳಿಕೆ ಸಾಮರ್ಥ್ಯವನ್ನು ಕಡಿಮೆ ಮಾಡುವ ತಾತ್ಕಾಲಿಕ ಭಾಗಶಃ ಅಂಗವಿಕಲತೆಯಿಂದ ಉಂಟಾಗುವ ಮಜೂರಿ ನಷ್ಟದ ಸಲುವಾಗಿ ಪ್ರತಿ ತಿಂಗಳಿಗೆ 1,000 ರೂಪಾಯಿಗೆ ಮೀರದಂತೆ ಗರಿಷ್ಠ ಮೂರು ತಿಂಗಳವರೆಗೆ ನಿಗದಿತ ಮಾಸಿಕ ಪರಿಹಾರ ನೀಡುವುದು:

ಪರಂತು, ಅಪಘಾತಕ್ಕೆ ಒಳಗಾದವನನ್ನು ಮೂರು ದಿನಗಳಿಗೆ ಮೀರಿದ ಅವಧಿಯವರೆಗೆ ಆಸ್ಪತ್ರೆಯಲ್ಲಿ ದಾಖಲ್ಮಾಡಿದ್ದಿರಬೇಕು ಮತ್ತು ಅವನು ಹದಿನಾರು ವರ್ಷಕ್ಕೆ ಮೇಲ್ಪಟ್ಟ ವಯಸ್ಸಿನವನಾಗಿರಬೇಕು.

(v) ಯಾವುದೇ ಖಾಸಗಿ ಸ್ವತ್ತಿಗೆ ಉಂಟಾದ ಹಾನಿಗಾಗಿ ವಾಸ್ತವ ಹಾನಿಯ ಆಧಾರದ ಮೇಲೆ 6,000 ರೂಪಾಯಿವರೆಗೆ ಪರಿಹಾರ ನೀಡುವುದು.

* * *